# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 494
2. ಸದಸ್ಯರ ಹೆಸರು : ಶ್ರೀ. ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 22.12.2022
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ಸಾಲದ ಹೊರೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ವಿಚಾರದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ನಮ್ಮ ರಾಜ್ಯಕ್ಕೆ ಎಚ್ಚರಿಕೆಯನ್ನು ನೀಡಿರುವುದು ಸರ್ಕಾರದ ಗಮನದಲ್ಲಿದೆಯೇ;</td><td rowspan="2">ರಾಜ್ಯವು ಹಣದ ಅವಶ್ಯಕತೆಯ ಆಧಾರದ ಮೇಲೆ ಸಾಲಕ್ಕೆ ಮುಂದಾಗುತ್ತದೆ. ರಾಜ್ಯದ ಸಾಲವು ಹೆಚ್ಚಾಗುತ್ತಿದ್ದರೂ ಸಹ ಅದನ್ನು ಮಿತಿಯಲ್ಲಿ ಇರಿಸುವುದರ ಮೂಲಕ ವಿತ್ತೀಯ ಶಿಸ್ತನ್ನು ಕಾಪಾಡಿಕೊಂಡಿದೆ.<br><br>ಭಾರತೀಯ ರಿಸರ್ವ್ ಬ್ಯಾಂಕ್ ಜೂನ್ 2022 ರಲ್ಲಿ ಪ್ರಕಟಿಸಿದ State Finances - A Risk Analysis ವರದಿಯಲ್ಲಿ ಕರ್ನಾಟಕವು ತನ್ನ ಸಮರ್ಥಕ ವಿತ್ತೀಯ ನಿರ್ವಹಣೆಯ ಮೂಲಕ ಜಿ.ಎಸ್.ಡಿ.ಪಿ. ಗೆ ಒಟ್ಟು ಋಣ ಅನುಪಾತದಲ್ಲಿ ಯಾವುದೇ ಹೆಚ್ಚಿನ ವ್ಯತ್ಯಾಸವಿಲ್ಲದೆ ನಿಯಂತ್ರಣದಲ್ಲಿರಿಸಿದೆ ಎಂದು ಕರ್ನಾಟಕ ರಾಜ್ಯದ ವಿತ್ತೀಯ ನಿರ್ವಹಣೆಯನ್ನು ತನ್ನ ವರದಿ ಪುಟ:116 ಮತ್ತು 129ರಲ್ಲಿ ಶ್ಲಾಘಿಸಿದೆ<br>ರಾಜ್ಯ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮತ್ತು ಬಂಡವಾಳ ಆಸ್ತಿ ಸೃಜಿಸಲು ಸಾಲವನ್ನು ಪಡೆಯಲಾಗುತ್ತದೆ.<br>ಮಹಾಲೇಖಪಾಲರ ಲೆಕ್ಕದನ್ವಯ ಮಾರ್ಚ್-2022ರ ಅಂತ್ಯದವರೆಗೆ ಬಾಕಿ ಇರುವ ಸಾರ್ವಜನಿಕ ಸಾಲದ ಮೊತ್ತ ರೂ. 374426.82 ಕೋಟಿಗಳಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ:<br><br>
<table>
<tr><td colspan="3">(ರೂ. ಕೋಟಿಗಳಲ್ಲಿ)</td></tr>
<tr><td>ಕ್ರ. ಸಂ</td><td>I. ಆಂತರಿಕ ಸಾಲದ ವಿವರ:</td><td>ಸಾರ್ವಜನಿಕ ಸಾಲದ ಮೊತ್ತ (ಮಾರ್ಚ್ 2022ರ ಅಂತ್ಯಕ್ಕೆ)</td></tr>
<tr><td>1</td><td>ಮಾರುಕಟ್ಟೆ ಸಾಲಗಳು</td><td>311289.85</td></tr>
<tr><td>2</td><td>ನಬಾರ್ಡ್ ಸಾಲಗಳು</td><td>5778.03</td></tr>
<tr><td>3</td><td>ಎನ್.ಎಸ್.ಎಸ್.ಎಫ್. & ಇತರೆ ಸಾಲಗಳು</td><td>11973.95</td></tr>
<tr><td></td><td>ಒಟ್ಟು - I</td><td>329041.82</td></tr>
</table></td></tr>
<tr><td>ಆ</td><td>ಪ್ರಸ್ತುತ ನಮ್ಮ ರಾಜ್ಯದ ಒಟ್ಟು ಸಾಲದ ಹೊರೆ ಎಷ್ಟು; ಈ ಸಾಲವನ್ನು ಯಾವ ಯಾವ ರೂಪದಲ್ಲಿ ಪಡೆಯಲಾಗಿದೆ; ಸಾಲದ ಹೊರೆಯು ಹೆಚ್ಚುತ್ತಾ ಹೋದರೆ ಆರ್ಥಿಕ ಸಮಸ್ಯೆ ತೀವ್ರಗೊಳ್ಳುವ ಸಾಧ್ಯತೆಗಳು ಇರುವುದರಿಂದ ಇದನ್ನು ಸರಿದೂಗಿಸಲು ಸರ್ಕಾರದ ಕ್ರಮವೇನು;</td></tr>
</table>

| | | |
|---|---|---|
| | | |
| | II. ಕೇಂದ್ರ ಸರ್ಕಾರದ ಸಾಲಗಳು ಮತ್ತು ಮುಂಗಡಗಳು: | |
| 1 | ಯೋಜನಾ ಕಾರ್ಯಕ್ರಮಗಳಿಗಾಗಿ ಸಾಲಗಳು | 7013.92 |
| 2 | ಇತರೆ ಸಾಲಗಳು | 38371.08 |
| | ಒಟ್ಟು - II | 45385.00 |
| | ಮಹಾ ಒಟ್ಟು (I + II) | 374426.82 |

- ಆರ್ಥಿಕ ಹೊರೆ ಕಡಿಮೆ ಮಾಡಲು ರಾಜ್ಯ ಸರ್ಕಾರವು ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಅವುಗಳ ಪೈಕಿ ಪ್ರಮುಖ ಕ್ರಮಗಳ ಮಾಹಿತಿ ಈ ಕೆಳಕಂಡಂತೆ ಇರುತ್ತವೆ:
- ಸಂಪನ್ಮೂಲಗಳ ಕ್ರೂಢೀಕರಣಕ್ಕೆ ಹೆಚ್ಚಿನ ಒತ್ತು ನೀಡುವುದು.
- ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವುದು.
- ಬದ್ಧ ವೆಚ್ಚವನ್ನು ಕಡಿಮೆ ಮಾಡುವುದು.

| | | |
|---|---|---|
| ಇ | ಕೋವಿಡ್ ನಂತರದಲ್ಲಿ ಆರ್ಥಿಕ ಸಂಕಷ್ಟ ಸರಿದೂರಿಸಲು, ವಿತ್ತೀಯ ಕೊರತೆಯ ಜಿಎಸ್‌ಡಿಪಿಯ ಪ್ರಮಾಣವನ್ನು ಶೇಕಡ ಎಷ್ಟಕ್ಕೆ ಏರಿಕೆ ಮಾಡಲಾಗಿದೆ; | ಕೋವಿಡ್-19ರ ಹಿನ್ನೆಲೆಯಲ್ಲಿ ರಾಜ್ಯದ ರಾಜಸ್ವ ಸಂಗ್ರಹಣೆಯಲ್ಲಿ ಕುಂಠಿತವಾಗಿತ್ತು. ರಾಜ್ಯದ ಸರ್ಕಾರದ ಆಯವ್ಯಯದಲ್ಲಿ ಮಂಡಿಸಲಾಗಿದ್ದ, ಯೋಜನೆಗಳನ್ನು ಅನುಷ್ಠಾನಗೊಳಿಸಲು, ಕೋವಿಡ್-19 ಪರಿಸ್ಥಿತಿಯನ್ನು ನಿಭಾಯಿಸಲು ಮತ್ತು ಬದ್ಧ ವೆಚ್ಚಗಳಾದ ವೇತನ, ಪಿಂಚಣಿ, ಹಿಂದಿನ ಸಾಲಗಳ ಅಸಲು ಮರು ಪಾವತಿ ಮತ್ತು ಬಡ್ಡಿ ಪಾವತಿಗಾಗಿ ಸಾಲವನ್ನು ಪಡೆಯಬೇಕಾದ ಪರಿಸ್ಥಿತಿ ಉಂಟಾಗಿತ್ತು.<br>ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ-2002ರನ್ವಯ ರಾಜ್ಯದ ಜಿ.ಎಸ್.ಡಿ. ಪಿ. ಯ ಶೇ. 3ರ ಮಿತಿಯೊಳಗೆ ಸಾಲವನ್ನು ಪಡೆಯಲು ಅವಕಾಶವಿರುತ್ತದೆ.<br>ಕೋವಿಡ್-19ರ ಪರಿಸ್ಥಿತಿಯಿಂದ ಆರ್ಥಿಕ ಚಟುವಟಿಗಳು ಕುಂಠಿತವಾದ ಕಾರಣ ಅಂದಾಜಿಸಿದ ಜಿ.ಎಸ್.ಡಿ.ಪಿ.ಯ ಪ್ರಗತಿ ಕಡಿಮೆಯಾಗಿತ್ತು. ಜಿ.ಎಸ್.ಡಿ.ಪಿಯನ್ನು ವಾರ್ಷಿಕವಾರು ಅಂದಾಜಿಸಲಾಗುತ್ತದೆ<br>2021-22 ಸಾಲಿನಲ್ಲಿ ಕೋವಿಡ್-19ರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ, ಕರ್ನಾಟಕ ರಾಜ್ಯ ಸೇರಿದಂತೆ ಇತರೆ ರಾಜ್ಯದ ಸರ್ಕಾರಗಳು ಆರ್ಥಿಕ ಹೊಣೆಗಾರಿಕೆ ಅಧಿನಿಯಮಗಳಿಗೆ ತಿದ್ದುಪಡಿ ತಂದು ಹೆಚ್ಚುವರಿ ಸಾಲ ಪಡೆಯಲು ಅವಕಾಶ ಕಲ್ಪಿಸಿಕೊಂಡಿರುತ್ತವೆ. |

ಅದರಂತೆ, 2021-22 ನೇ ಸಾಲಿಗೆ ರಾಜ್ಯ ಸರ್ಕಾರವು ಸಹ ಉಭಯ ಸದನಗಳ ಅನುಮೋದನೆ ಪಡೆದು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮಕ್ಕೆ ತಿದ್ದುಪಡಿ ತಂದು ಜಿ.ಎಸ್.ಡಿ.ಪಿ.ಯ ಶೇ.4 ರವರೆಗೆ ಹೆಚ್ಚುವರಿ ಸಾಲ ಪಡೆಯಲು ಅವಕಾಶ ಕಲ್ಪಿಸಿಕೊಂಡಿತ್ತು. ಆದರೆ, ಶೇ. 3.50 ರ ಮಿತಿಯೊಳಗೆ ಮಾತ್ರ ಸಾಲ ಪಡೆಯಲಾಗಿದೆ.

ಇತ್ತೀಚೆಗೆ ಆರ್ಥಿಕ ಚಟುವಟಿಕೆಗಳಲ್ಲಿ ಚೇತರಿಕೆ ಕಂಡು ಬಂದಿರುತ್ತದೆ. ಆದುದರಿಂದ ಆಯವ್ಯಯದಲ್ಲಿ ಅಂದಾಜಿಸಿರುವ ರಾಜಸ್ವ ಸ್ವೀಕೃತಿಯ ಗುರಿಯನ್ನು ತಲುಪುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ-2002ರನ್ವಯ ಶೇ 3.00 ರ ಮಿತಿ ಮೀರದಂತೆ ಸಾಲ ಪಡೆಯಲಾಗುವುದು.

ಈ | ಸದ್ಯ ಏರುತ್ತಿರುವ ಸಾಲದ ಮರುಪಾವತಿಗಾಗಿ ಸರ್ಕಾರ ಪ್ರಸ್ತುತ ವರ್ಷದಲ್ಲಿ ಎಷ್ಟು ಕೋಟಿಗಳನ್ನು ವೆಚ್ಚ ಮಾಡಬೇಕಾಗಿರುತ್ತದೆ? (ಇದರಲ್ಲಿ ಅಸಲು ಮತ್ತು ಬಡ್ಡಿಯ ವಿವರವನ್ನು ನೀಡುವುದು)

ಪ್ರತಿ ವರ್ಷ ಆಯವ್ಯಯ ಅಂದಾಜಿನಲ್ಲಿ ಸಾಲ ಮರುಪಾವತಿಗೆ ಹಾಗೂ ಬಡ್ಡಿ ಪಾವತಿಗೆ ಬೇಕಾಗುವ ಅನುದಾನವನ್ನು ಪ್ರಧಾನ ಲೆಕ್ಕ ಶೀರ್ಷಿಕೆ: 6003, 6004 ಮತ್ತು 2049 ರಡಿ ಅನುದಾನ ಕಲ್ಪಿಸಿಕೊಂಡು ರಾಜ್ಯ ಸರ್ಕಾರವು ಮಾಡಿರುವ ಸಾಲ ಹಾಗೂ ಅದರ ಮೇಲಿನ ಬಡ್ಡಿಯನ್ನು ಪಾವತಿಸಲಾಗುವುದು. 2022-23ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರವು ಪಾವತಿಸಬೇಕಿರುವ ಅಸಲು ಮತ್ತು ಬಡ್ಡಿಗೆ ಮೀಸಲಿರಿಸಿದ ಅನುದಾನದ ವಿವರಗಳು ಕೆಳಕಂಡಂತಿರುತ್ತವೆ:

(ರೂ. ಕೋಟಿಗಳಲ್ಲಿ)

| ಕ್ರ. ಸಂ | | 2022-23ನೇ ಸಾಲಿನಲ್ಲಿ ಅಸಲು ಪಾವತಿಗೆ ಆಯವ್ಯಯ ಅಂದಾಜಿನಲ್ಲಿ ಒದಗಿಸಿಕೊಳ್ಳಲಾದ ಅನುದಾನ | 2022-23ನೇ ಸಾಲಿನಲ್ಲಿ ಬಡ್ಡಿ ಪಾವತಿಗೆ ಆಯವ್ಯಯ ಅಂದಾಜಿನಲ್ಲಿ ಒದಗಿಸಿಕೊಳ್ಳಲಾದ ಅನುದಾನ |
|---|---|---|---|
| | I. ಆಂತರಿಕ ಸಾಲದ ವಿವರಗಳು: | | |
| 1 | ಮಾರುಕಟ್ಟೆ ಸಾಲಗಳು | 10000.06 | 24226.37 |
| 2 | ನಬಾರ್ಡ್ ಸಾಲಗಳು | 970.01 | 235.22 |
| 3 | ಎನ್.ಎಸ್.ಎಸ್.ಎಫ್. | 1627.92 | 1162.99 |
| 4 | ಇತರೆ | 34.71 | 3314.96 |
| | ಒಟ್ಟು - I | 12632.70 | 28939.54 |
| | | | |
| | II. ಕೇಂದ್ರ ಸರ್ಕಾರದ ಸಾಲಗಳು ಮತ್ತು ಮುಂಗಡಗಳು: | | |
| 1 | ಯೋಜನಾಕಾರ್ಯಕ್ರಮಗಳಿಗಾಗಿ ಸಾಲಗಳು | 1540.99 | 454.80 |

| | | | | |
|---|---|---|---|---|
| | 2 | ರಾಜ್ಯದ ಇತರೆ ಸಾಲಗಳು | 5.01 | 0.27 |
| | | ಒಟ್ಟು – II | 1546.00 | 455.07 |
| | | ಮಹಾ ಒಟ್ಟು (I + II) | 14178.70 | 29394.61 |

ಸಂಖ್ಯೆ: ಆಇ 80 ಬಿಜಿಎಲ್ 2022

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ